**ಎಮ್.ವಿ.ಸಿ. ನಂಃ889 /2023**
**ಪಿ .ಡಬ್ಲ್ಯೂಃ1,**

ದಿನಾಂಕ : **19-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ವಿ ಎಸ್. ಎಮ್. ವಕೀಲರಿಂದ :

ನಾನು ಪಿ.ಯು.ಸಿ. ತನಕ ಓದಿರುತ್ತೇನೆ. ನಾನು ನನ್ನ ವಯಸ್ಸನ್ನು ತೋರಿಸಲು ನನ್ನ 10 ನೇತರಗತಿಯ ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣ ಪತ್ರ ಹಾಜರು ಪಡಿಸಿಲ್ಲಾ ನಿಪಿ-12 ರಲ್ಲಿ ನನ್ನ ಜನನ ಇಸವಿ 1976 ಎಂದು ನಮೂದಿಸಿದೆ ಎಂದರೆ ಸರಿ. ನಾನು ನನ್ನ ನಿಜವಾದ ವಯಸ್ಸು ನ್ಯಾಯಾಲಯಕ್ಕೆ ಗೊತ್ತಾಗಬಾರದೆಂದು ನನ್ನ 10 ನೇ ತರಗತಿ ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣ ಪತ್ರ ಹಾಜರು ಪಡಿಸಿಲ್ಲಾ ಎಂದರೆ ಸರಿಯಲ್ಲ. ನನ್ನ ವಯಸ್ಸು 50 ವರ್ಷಕ್ಕಿಂತ ಮೇಲ್ಪಟ್ಟು ಇದೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲಯ ಅರ್ಜಿಯಲ್ಲಿ ನನ್ನ ವಯಸ್ಸು 40 ಅಂತ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಿದ್ದೇನೆಂದು ತೋರಿಸಲು ನನ್ನನ್ನು ನೇಮಕ ಗೊಳಿಸಿದ ದಾಖಲೆ ಅಥವಾ ಬೇರೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ. ನಾನು ಎಲ್ಲಿ ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಿದ್ದೇನೆಂದು ನನ್ನ ಸಾಕ್ಷಿ ಪ್ರಮಾಣ ಪತ್ರ ಅಥವಾ ನನ್ನ ಅರ್ಜಿಯಲ್ಲಿ ತಿಳಿಸಿಲ್ಲಾ ಎಂದರೆ ಸರಿಯಲ್ಲ

ನಾನು ಸೆಕ್ಯೂರಿಟಿ ಗಾರ್ಡ ಕೆಲಸ ಎಂದು ಕೆಲಸ ಮಾಡುತ್ತಿದ್ದು ನನಗೆ ತಿಂಗಳಿಗೆ ರೂ. 25,000/- ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ. 25,000/- ಸಂಬಂಳ ಪಡೆಯುತ್ತಿದ್ದೆ ಎಂದು ಬ್ಯಾಂಕ ಸ್ಟೆಟಮೆಂಟ ಅಥವಾ ವೇತನ ರಶಿದಿ ಹಾಜರು ಪಡಿಸಿಲ್ಲಾ ಆದರೆ ನಾನು ನಗದಾಗಿ ಸಂಬಂಳ ಪಡೆಯುತ್ತಿದ್ದೆ. ನನ್ನ ಸಂಬಂಳವನ್ನು ನಗದಾಗಿ ಪಡೆಯುತ್ತಿದ್ದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರ ಅಥವಾ ನನ್ನ ಅರ್ಜಿಯಲ್ಲಿ ತಿಳಿಸಿಲ್ಲಾ. ನನಗೆ ತಿಂಗಳಿಗೆ ರೂ. 25,000/- ಆದಾಯ ಇತ್ತು ಎಂದು ತೋರಿಸಲು ನಾನು ಆದಾಯ ತೆರಿಗೆ ಪಾವತಿಸಿಲ್ಲಾ. ನನಗೆ ತಿಂಗಳಿಗೆ ರೂ. 25,000/- ಆದಾಯ ಇಲ್ಲಾ ಮತ್ತು ನಾನು ಸೆಕ್ಯೂರಿಟಿ ಗಾರ್ಡನಾಗಿ ಕೆಲಸ ಮಾಡುತ್ತಿಲ್ಲಾ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ದೂರನ್ನು ನಾನೇ ಸಲ್ಲಿಸಿದ್ದೇನೆ. ನಾನು ಅಪಘಾತವಾದ 2 ದಿನಗಳ ನಂತರ ದೂರು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ರಾವೂರದಿಂದ ಶಹಾಬಾದಗೆ ಹೋರಟಿದ್ದೆ ನಂತರ ಮಾಲಗತ್ತಿ

ಕ್ರಾಸನಲ್ಲಿ ನನ್ನ ಮೋಟಾರ ಸೈಕಲನ್ನು ಬದಿಯಲ್ಲಿ ನಿಲ್ಲಿಸಿದಾಗ ಒಬ್ಬ ವ್ಯಕ್ತಿ ಮೋಟಾರ ಸೈಕಲ ಮೇಲೆ ಹಿಂದಿನಿಂದ ಬಂದು ಡಿಕ್ಕಿ ಪಡಿಸಿದನು. ನನ್ನ ಅರ್ಜಿಯಲ್ಲಿ ಮಾಲಗತ್ತಿ ಕ್ರಾಸ ಬಳಿ ಮೋಬೈಲನಲ್ಲಿ ಮಾತನಾಡುವಾಗ ಮೋಟಾರ ಸೈಕಲ ಬಂದು ಡಿಕ್ಕಿ ಪಡಿಸಿದೆ ಎಂದು ಅರ್ಜಿಯಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ-3 ರ 2 ನೇ ಪುಟದ ಪಂಚನಾಮೆಯಲ್ಲಿ ಪೋಲಿಸರು ನಾನು ರಾವೂರ ಕಡೆಯಿಂದ ಶಹಾಬಾದ ಕಡೆಗೆ ಮಾಲಗತ್ತಿ ಕ್ರಾಸ ಹತ್ತಿರ ರೋಡಿನ ಮೇಲೆ ಹೋಗುತ್ತಿದ್ದಾಗ ಅಂತಾ ಪಂಚನಾಮೆ ಬರೆದಿದ್ದಾರೆ ಎಂದರೆ ಸಾಕ್ಷಿ ನಾನು ಬದಿಯಲ್ಲಿ ನಿಂತಾಗ ಅಪಘಾತ ವಾಗಿದೆ ಎಂದು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ವಾಹನ ಸಂಖ್ಯೆ: ಕೆಎ -32-ಇಪಿ-0830, ಸದರಿ ವಾಹನ ನನ್ನ ಹೆಸರಿನಲ್ಲಿ ಇದೆ. ನನಗೆ ಚಾಲನಾ ಪತ್ರ ಇದೆ. ನಾನು ನನ್ನ ಚಾಲನಾ ಪತ್ರ ವನ್ನು ನ್ಯಾಯಾಲಯ್ಕಕ್ಕೆ ಸಲ್ಲಿಸಿಲ್ಲಾ. ನಾನು ವಾಹನ ಚಲಾಯಿಸುತ್ತಿದ್ದಾಗ ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದೇನೆ ಯಾವುಧೇ ಅಪಘಾತ ಆಗಿಲ್ಲಾ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೆ ಅಪಘಾತವಾಗದೇ ಇದ್ದರೂ ಕೆಎ-32-ಇಎನ್-0570 ಈ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ಸಲ್ಲಸಿದ್ದೇನೆ ಎಂದರೆ ಸರಿಯಲ್ಲ. ಕೆಎ-32-ಇಎನ್-0570 ಈ ವಾಹನದಿಂದ ಯಾವುದೇ ಅಪಘಾತ ಆಗಿಲ್ಲಾ ಮತ್ತು ಆ ಕಾಲದಲ್ಲಿ ಸದರಿ ವಾಹನ ಚಾಲಕನಿಗೆ ಯಾವುದೇ ಚಾಲನಾ ಪತ್ರ ಇರಲಿಲ್ಲಾ ಎಂದರೆ ಸರಿಯಲ್ಲ.

ನನ್ನ ದೂರು ಮತ್ತು ಅರ್ಜಿ ಮತ್ತು ಪೋಲಿಸರು ಸಲ್ಲಿಸಿದ ದಾಖಲೆಗಳು ಒಂದಕ್ಕೊಂದು ತಾಳೆ ಆಗುವುದಿಲ್ಲಾ ನಾನು ಸ್ವತ: ಮೋಟಾರ ಸೈಕಲ ಮೇಲಿಂದ ಬಿದ್ದು ಕೆಎ-32-ಇನ್ -0570 ಈ ವಾಹನದ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ಆದ ಮೇಲೆ ಯಾವುದೇ ಎಮ್. ಎಲ್. ಸಿ. ಆಗಿಲ್ಲಾ ಎಂದರೆ ಸರಿಯಲ್ಲ. ಯಾವುದೇ ಅಪಘಾತವಾಗದೇ ಇದ್ದರೂ ನಾನು ಪೋಲಿಸರು ಜೊತೆ ಮಿಲಾಫೆ ಆಗಿ ಕೆಎ-32-ಇಎನ್-0570 ಈ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೆಎ-32-ಇಎನ್-0570 ವಾಹನದಿಂದ ಯಾವುದೇ

**ಎಮ್.ವಿ.ಸಿ. ನಂ:889 /2023**
**ಪಿ .ಡಬ್ಲ್ಯೂ:1,**

ಅಪಘಾತ ಆಗಿಲ್ಲಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದಿಂದ ಯಾವುದೇ ನನಗೆ ಗಾಯ ಆಗಿಲ್ಲಾ ಎಂದರೆ ಸರಿಯಲ್ಲ.

ನಾನು ಸದರಿ ಅಪಗಾತದಿಂಡ ಒಳರೋಗಿಯಅಗಿ ದಾಖಲೆ ಆಗಿಲ್ಲಾ ಅದಕ್ಕೆ ರೂ. 3,00,000/- ಖರ್ಚು ಆಗಿಲ್ಲಾ ಎಂಧರೆ ಸರಿಯಲ್ಲ.ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ರೂ. 1,50,000/- ಹಣ ಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾಖಲೆ ನಿಪಿ-1 ರಿಂದ 12 ಎಲ್ಲಾ ಈ ಪ್ರಕರಣಕ್ಕೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ವೈದ್ಯರ ಸಹಾಯದಿಂದ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಹೆಚ್ಚಿನ ಪ್ರಮಾಣ ಅಂಗ ನ್ಯೂನ್ಯತೆ ಬರೆಸಿಕೊಂಡು ಸಲ್ಲಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದ ಪರಿಹಾರ ಯಾವುದೇ ಆದಾರ ಇಲ್ಲಾ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಪಘಾತವಾಗದ ಕಾರಣ ಪರಿಹಾರ ಪಡೆಯುಲು ವಾಹನವನ್ನು ಸಿಲುಕಿಸಿ ಸುಳ್ಳು ದೂರು ನೀಡಿದ ಕಾರಣ ನಾನು ಪರಿಹಾರ ಪಡೆಯಲು ಅರ್ಹನಲ್ಲಾ ಎಂದರೆ ಸರಿಯಲ್ಲ. ಸದರಿ ಅಪಘಾತ ಪಡಿಸಿದ ಎನ್ನಲಾದ ಮೋಟಾರ ಸೈಕಲ ಚಾಲಕನಿಗೆ ಚಾಲನ ಪತ್ರ ಇರಲಿಲ್ಲಾ ಆತನು ವಿಮೆ ಷರತ್ತುಗಳನ್ನು ಉಲ್ಲಂಘಿಸಿದ ಕಾರಣ ನನಗೆ ಅಪಘಾತ ದ ಪರಿಹಾರ ಪಡೆಯಲು ಅರ್ಹನಲ್ಲಾ ಎಂದರೆ ಸರಿಯಲ್ಲ. ನಾನೇ ವಾಹನದಿಂದ ಬಿದ್ದು ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**